**ಓ.ಎಸ್. ನಂ. 113/2018**

**ಡಿ. ಡಬ್ಲ್ಯೂ ೩ 1**

**ದಿಃ 26.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದವರೆದ ಪಾಟೀ ಸವಾಲು ಃ ವಾದಿ ಪರ ಶ್ರೀ ಸಿ ಕೆ ಆರ್ ವಕೀಲರಿಂದ ಃ**

ವಾದಿಯು ಕ್ರಯ ಪತ್ರದಲ್ಲಿ ಸಹಿ ಮಾಡಿಲ್ಲ. ಕ್ರಯ ಪತ್ರ ಮಾಡಿಕೊಡಲು ಹಾಗೂ ನೋಂದಾಯಿತ ಪತ್ರ ಮಾಡಿಕೊಡಲು ವಾದಿಯು ಊರಿನಲ್ಲಿ ಇರಲಿಲ್ಲ. ಬೆಂಗಳೂರಿನಲ್ಲಿ ಅವರ ಸಂಬಂಧಿಕರ ಮನೆಯಲ್ಲಿ ಇದ್ದರು. ಬೆಂಗಳೂರಿನಲ್ಲಿ ವಾದಿ ಯಾವ ವಿಳಾಸದಲ್ಲಿ ವಾಸ ಇದ್ದರು ಎಂದು ಆ ಸಮಯದಲ್ಲಿ ಗೊತ್ತಿತ್ತು. ಆ ಸಮಯದಲ್ಲಿ ನಾನು ಬೆಂಗಳೂರಿನ ಆ ವಿಳಾಸಕ್ಕೆ ಹೋಗಿ ಕ್ರಯ ಬರೆದುಕೊಡಲು ಕೇಳಲಿಲ್ಲ, ಏಕೆಂದರೆ ಆಗ ಹೆಣ್ಣು ಮಕ್ಕಳಿಗೆ ಭಾಗ ಇಲ್ಲ ಎಂದು ನನಗೆ ಹೇಳಿದ್ದರು. ದಾವಾ ಸ್ವತ್ತುಗಳ ವಿಚಾರವಾಗಿ ನಾನು ಯಾರಿಗೂ ದಾನ ಪತ್ರ, ವಿಲ್ ಮತ್ತು ಭೋಗ್ಯ ಪತ್ರಗಳನ್ನು ಮಾಡಿ ಕೊಟ್ಟಿಲ್ಲ. ನಿಡಿ 3 ರಲ್ಲಿ ಇರುವ ಗಂಗಮ್ಮ ನನ್ನ ಹೆಂಡತಿ ಎಂದರೆ ಸರಿ. ಅದರಲ್ಲಿ ಇರುವ ಸ್ವತ್ತು ನನ್ನ ಹೆಂಡತಿಗೆ ಮಂಜೂರಾಗಿತ್ತು ಎಂದರೆ ಸರಿ. ನಿಡಿ 3 ರಲ್ಲಿ ಸ. ನಂ. 42/2 ಎಂದು ಬರೆದಿದೆ. ಮನೆ ಮಂಜೂರಾಗಬೇಕಾದರೆ ಪಂಚಾಯ್ತಿಯಿಂದ ಖಾತೆ ಆಗಬೇಕು ಎಂದರೆ ಸರಿ. ನನ್ನ ಹೆಸರಿನಲ್ಲಿ ಅಥವಾ ನನ್ನ ಹೆಂಡತಿಯ ಹೆಸರಿನಲ್ಲಿ ನಿಡಿ 3 ರಲ್ಲಿ ಇರುವ ಸ್ವತ್ತಿನ ಪಂಚಾಯ್ತಿ ಖಾತೆ ಆಗಿಲ್ಲ. ಪಂಚಾಯ್ತಿ ಯವರು ಮನೆ ಕಟ್ಟಲು ಪರವಾನಗಿ ಕೊಟ್ಟಿದ್ದಾರೆ. ನಾನು ಸಾಲ ಪಡೆದು ಮನೆ ಕಟ್ಟಿದ್ದೇನೆ. ಆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಮುಂದೆ ಕೊಡುತ್ತೇನೆ. ನಾನು ಹಾಜರು ಪಡಿಸಿದ ದಾಖಲೆಗಳು ಅಂದರೆ ನಿಡಿ 5 ದಿಃ 14.05.2021 ರಿಂದ ದಿಃ 13.05.2022 ರವರೆಗಿನ ದಾಖಲೆ ಇರುತ್ತದೆ ಎಂದರೆ ಸರಿ . ನಿಡಿ 5 ರಲ್ಲಿ ಬೆಳೆ ಸಾಲ ಕೊಟ್ಟ ಬಗ್ಗೆ ಬರೆದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ರಾಮಕ್ಕ ಕೋಂ ಲೇಟ್ ವಾದಿಯ ತಾಯಿ ಎಂದರೆ ಸರಿ . ನಿಡಿ 10 ರಲ್ಲಿರುವ ರಂಗಪ್ಪ ನಾನೇ ಇರುತ್ತೇನೆ. ರಾಮಕ್ಕನ ಹೆಸರಿನಲ್ಲಿ 24 1/2 ಗುಂಟೆ. ನನ್ನ ಹೆಸರಿನಲ್ಲಿ 21 ಗುಂಟೆ ಸೇರಿ 1 ಎಕರೆ 5 1/2 ಗುಂಟೆ ನಮ್ಮ ಹೆಸರಿನಲ್ಲಿ ಇದೆ ಎಂದರೆ ಸರಿ. ಆ ಎರಡೂ ಸ್ವತ್ತುಗಳ ಮೇಲೆ ವಾದಿ ದಾವೆ ಮಾಡಿದ್ದಾರೆ ಎಂದರೆ ಸರಿ. ದಾವಾ ಐಟಂ ನಂ. 2 ರ ಸ್ವತ್ತು

ವಾದಿಯ ಸಹೋದರನಾದ ಲಂಕೇಶ ಮತ್ತು ಚಂದ್ರ ಇವರ ಹೆಸರಿನಲ್ಲಿ ಇದೆ ಎಂದರೆ ಸರಿ. ಅದನ್ನು ಅವರು ಬೇರೆಯವರಿಂದ ಕೊಂಡುಕೊಂಡಿದ್ದಾರೆ ಎಂದರೆ ಸರಿ. ನಿಡಿ 16 ಮತ್ತು ನಿಡಿ 17 ಇವುಗಳಲ್ಲಿರುವ ಮನೆ ದಾವಾ ಸ್ವತ್ತಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಬೋರ್ ವೆಲ್ ಹಾಕಿಸಿ, ಅಡಿಕೆ ಮತ್ತು ರೇಷ್ಮೆ ಬೆಳೆದಿದ್ದೇನೆ ಎಂದರೆ ಸರಿಯಲ್ಲ. ಫೋಟೋಗಳನ್ನು ಈ ಕೇಸಿಗಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತಿನಲ್ಲಿ 1/5 ಭಾಗದ ಸ್ವತ್ತನ್ನು ತಪ್ಪಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**